6

# ಗಂಡನೊಂದಿಗಿನ ಹೆಂಡತಿಯ ಸಂಬಂಧ

*ಸ್ತ್ರೀಯರೇ, ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ. ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನೋ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ ... . ಹಾಗೆಯೇ ಪುರುಷರು ಸಹ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ ತಮ್ಮ ಹೆಂಡತಿಯರನ್ನು ಪ್ರೀತಿಸುವ ಹಂಗಿನವರಾಗಿದ್ದಾರೆ. ತನ್ನ ಹೆಂಡತಿಯನ್ನು ಪ್ರೀತಿಸುವವನು ತನ್ನನ್ನೇ ಪ್ರೀತಿಸಿಕೊಳ್ಳುವವನಾಗಿದ್ದಾನೆ (ಎಫೆಸ 5:22-28).*

ಯೇಸುವಿನ ಬೋಧನೆಯನ್ನು ಹೊಸ ಒಡಂಬಡಿಕೆಯನ್ನು ಯಥಾರ್ಥವಾಗಿ ಬೋಧಿಸಲ್ಪಟ್ಟ ನಂತರ, ಕೆಲವರು ಒಪ್ಪಿಕೊಂಡು ಚಿತ್ತೈಸುತ್ತಾರೆ. ಯೇಸುವಿನ ಹೇಳಿಕೆಯನ್ನು ಹಿಂಬಾಲಿಸಲು ಕೆಲವರು ಇಷ್ಟಪಡಲಿಲ್ಲ ಯೋಹಾನ 6:65, 66ರಲ್ಲಿ:

> ಮತ್ತು ಆತನು ತಂದೆಯ ಅನುಗ್ರಹವಿಲ್ಲದೆ ಯಾರೂ ನನ್ನ ಬಳಿಗೆ ಬರಲಾರರು ಎಂಬದನ್ನು ನಾನು ನಿಮಗೆ ಅದರ ದೆಸೆಯಿಂದಲೇ ಹೇಳಿದನು ಅಂದನು. ಅಂದಿನಿಂದ ಆತನ ಶಿಷ್ಯರಲ್ಲಿ ಅನೇಕರು ಹಿಂಜರಿದು ಆತನ ಕೂಡ ಸಂಚಾರ ಮಾಡುವದನ್ನು ಬಿಟ್ಟರು.

ಯೇಸು ಬೋಧಿಸಿರುವ ಎಲ್ಲವನ್ನು ನಾವು ಒಪ್ಪಿಕೊಳ್ಳಬೇಕು. ನಾವು ಆತನ ಶಿಷ್ಯರಾಗುವದಕ್ಕೆ ಮನಸ್ಸಿಟ್ಟಿದ್ದರೆ ಮಾತ್ರ, ಆತನ ಬೋಧನೆಯನ್ನು ಒಪ್ಪಿಕೊಳ್ಳುತ್ತೇವೆ. ಇಲ್ಲದೆ ಹೋದರೆ ನಾವು ಕೇವಲ ನಮ್ಮ ಮಾರ್ಗಗಳಲ್ಲಿಯೇ ಹೋಗುವವರಾಗಿದ್ದೇವೆ.

ಕೆಲವರು ಸುವಾರ್ತೆಗಳನ್ನು ಒಪ್ಪಿಕೊಂಡು, ಹೊಸ ಒಡಂಬಡಿಕೆಯ ಇತರೆ ಪುಸ್ತಕಗಳು ಯೇಸುವಿನ ಬೋಧನೆಗಳಲ್ಲ ಎಂದು ತಿರ್ಮಾನಿಸುತ್ತಾರೆ. ಇದರಿಂದ ಅವರು ಯೇಸುವಿನ ವಾಕ್ಯಗಳನ್ನು ಕಳೆದುಕೊಳ್ಳುತ್ತಾರೆ. ಹೊಸ ಒಡಂಬಡಿಕೆಯ ಎಲ್ಲಾ ಬರವಣಿಗೆಗಳು, ಪರಿಶುದ್ಧಾತ್ಮನ ಮೂಲಕ ಪ್ರೇರಿತವಾಗಿವೆ (ಯೋಹಾನ 14:26; 16:12-14; 1 ಕೊರಿಂಥ 14:37). ಯೇಸುವಿನ ಎಲ್ಲಾ ಪ್ರಕಟಣೆಗಳನ್ನು ಗ್ರಹಿಸಲು ನಾಲ್ಕು ಸುವಾರ್ತೆಗಳ ಸಂಗಡ ಇತರೆ ಪುಸ್ತಕಗಳೂ ನಮಗೆ ಅವಶ್ಯವಾಗಿವೆ.

ಆದಿಕಾಂಡ 2ರ, ಪ್ರಸ್ತಾಪದಂತೆ ಪೌಲನು, ಯೇಸುವಿನ ನಾಯಕತ್ವವನ್ನೇ ಹಿಂಬಾಲಿಸಿ, ಯೇಸುವಿನ ಬೋಧನೆಗೆ ಪೂರಕವಾಗುವಂತೆ, ಎಫೆಸ 5:29-31ರ ವಾಕ್ಯವನ್ನು ಬರೆದಿದ್ದಾನೆ. ಮದುವೆಯ ವಿಷಯದಲ್ಲಿ, ಆದಿಕಾಂಡದಲ್ಲಿರುವ ಬೋಧನೆಯನ್ನೇ ಪೌಲನು ಪ್ರಸ್ತಾಪಿಸಿದ್ದಾನೆ. "ಆದಿಯಲ್ಲಿ ದೇವರು ಅವರನ್ನು ಗಂಡು - ಹೆಣ್ಣಾಗಿ ಉಂಟು ಮಾಡಿರುವ ವಿಷಯವನ್ನೂ ನೀವು ಕೇಳಲಿಲ್ಲವೆ, ಆದುದರಿಂದ ಪುರುಷನು ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರೂ ಒಂದೇ ಶರೀರವಾಗಿರುವರು ಎಂದು ಬರೆದಿರುವದಲ್ಲವೇ?" (ಮತ್ತಾಯ 19:4, 5; ಆದಿಕಾಂಡ 2:24). ಸ್ತ್ರೀ ಪುರುಷರ ಕುರಿತ ಸಂಬಂಧದ ಬಗ್ಗೆ ಆದಿಕಾಂಡದಲ್ಲಿರುವ ಈ ರೀತಿಯಾದ ಹೇಳಿಕೆಯನ್ನು ಯೇಸು ಸಮ್ಮತಿಸಿದ್ದಾನೆ. ಅದೇ ರೀತಿಯಾಗಿ, ಪೌಲನು ಸಹ ಆದಿಕಾಂಡದಲ್ಲಿರುವ ಸ್ತ್ರೀ ಪುರುಷರ ಸಂಬಂಧದ ಹೇಳಿಕೆಯನ್ನು ಸನ್ನಿಹಿತಪಡಿಸಿದ್ದಾನೆ.

## ಗಂಡಂದಿರ ಪಾತ್ರ

ಮದುವೆಯ ಸಂಬಂಧದ ಜವಾಬ್ದಾರಿಯು ಗಂಡನಿಂದಲೇ ಪ್ರಾರಂಭವಾಗುತ್ತದೆ. ನಮ್ಮೆಲ್ಲರ ಸಂಬಂಧವು ಹೇಗೆ ದೇವರಿಂದ ಉಂಟಾಗಿ, ಆತನಲ್ಲಿಯೇ ವಿಶ್ರಾಂತಿ ಪಡೆಯುತ್ತದೋ, ಹಾಗೆಯೇ, ಮದುವೆಯನ್ನು ಸರಿಯಾದ ರೀತಿಯಲ್ಲಿ ನಡೆಸುವ ಹಾಗೆ, ವಿಶ್ರಾಂತಿಯಲ್ಲಿಡುವ ಜವಾಬ್ದಾರಿಯು, ಗಂಡನಿಂದಲೇ ಪ್ರಾರಂಭವಾಗುತ್ತದೆ. ದೇವರು ತನ್ನ ತ್ಯಾಗಮಯವಾದ ಪ್ರೀತಿಯನ್ನು ನಮಗೆ ತೋರಿಸಿದಂತೆ, ಗಂಡನೂ ಸಹ ತ್ಯಾಗಮಯವಾದ ಪ್ರೀತಿಯಿಂದ ತನ್ನ ಹೆಂಡತಿಯ ಜೊತೆಯಲ್ಲಿ ಸಂಸರ್ಗ ಮಾಡಬೇಕು (ಎಫೆಸ 5:25, 28; ಕೊಲೊಸ್ಸೆ 3:19). ಈ ಬುನಾದಿಯ ಮೇಲೆ ಮದುವೆಯು ಕಟ್ಟಲ್ಪಡಬೇಕು.

ಪೇತ್ರನು ಬರೆದಂತೆ, "ಅದೇ ರೀತಿಯಾಗಿ ಪುರುಷರೇ, ಸ್ತ್ರೀಯು ಪುರುಷನಿಗಿಂತ ಬಲಹೀನಳೆಂಬುದನ್ನು ಜ್ಞಾಪಕಮಾಡಿಕೊಂಡು, ನಿಮ್ಮ ಹೆಂಡತಿಯರ ಸಂಗಡ ವಿವೇಕ ದಿಂದ ಒಗತನಮಾಡಿರಿ ಅವರು ಜೀವವರಕ್ಕೆ ನಿಮ್ಮೊಂದಿಗೆ ಬಾಧ್ಯರಾಗಿದ್ದಾರೆಂದು ತಿಳಿದು ಅವರಿಗೆ ಮಾನವನ್ನು ಸಲ್ಲಿಸಿರಿ. ಹೀಗೆ ನಡೆದರೆ ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿ ಇರುವದಿಲ್ಲ" (1 ಪೇತ್ರ 3:7). ಯಾವುದೇ ಗಂಡನು ತನ್ನ ಹೆಂಡತಿಯ ಮೇಲೆ ಅಧಿಕಾರವನ್ನಾಗಲಿ, ಆಡಳಿತವನ್ನಾಗಲಿ ಅಥವಾ ಆಕೆಯ ಮೇಲೆ ಪ್ರಭುತ್ವವನ್ನಾಗಲೀ ಚಲಾಯಿಸಲು ಸಾಧ್ಯವಿಲ್ಲ. ಆಕೆಯನ್ನು ಅನುಕಂಪದಿಂದಲೂ, ತಿಳುವಳಿಕೆಯಿಂದಲೂ, ಸ್ವತ್ಯಾಗದಿಂದಲೂ ಪೋಷಿಸ ಬೇಕು. ಆಕೆಯೊಂದಿಗೆ ಸೆಣಸಾಡಲು, ದೇವರು ಪುರುಷನಿಗೆ ಸಮಾನವಾದ ದೇಹವನ್ನು ಆಕೆಗೆ ನೀಡದೆ ಇರುವದರಿಂದ, ಆಕೆಯ ಮೇಲೆ ಪುರುಷನಿಗೆ ಹಕ್ಕು ಇರುವದಿಲ್ಲ. ಆಕೆಯ ದೈಹೀಕ ಶಕ್ತಿಯನ್ನು ಹೊಂದದೆ ಇರುವದರಿಂದ ಗಂಡನೊಂದಿಗೆ ಸೆಣದಾಡಲು ಸಾಧ್ಯವಿಲ್ಲ. ಅವನು, ಆಕೆಯನ್ನು ತನ್ನ ದೈಹೀಕ ಹಾಗೂ ಆತ್ಮೀಕ ಸಂಗಾತಿಯೆಂದು ತಿಳಿದು ಒಗತನ ಮಾಡಬೇಕು, ಮತ್ತು ಸನ್ಮಾನಿಸಬೇಕು. ಈ ರೀತಿಯಾಗಿ ಇರುವ ಕ್ರೈಸ್ತ ಸಂಬಂಧವನ್ನು ಸ್ತ್ರಿ ಪುರುಷರ ಸಂಬಂಧದಲ್ಲಿ ತೋರ್ಪಡಿಸುತ್ತದೆ.

## ಹೆಂಡತಿಯರ ಪಾತ್ರ

ಗಂಡನ ಯಜಮಾನಿಕೆಗೆ, ಹೆಂಡತಿಯು ಅಧೀನಳಾಗಿರಬೇಕು. ಗಂಡನು ಆಕೆಯನ್ನು ಬಲಾತ್ಕಾರವಾಗಿ, ಅಧೀನಪಡಿಸಿಕೊಳ್ಳಬಾರದು. ಕುಟುಂಬದ ಒಳತಿಗಾಗಿ ಆಕೆಯು ಗಂಡನೊಂದಿಗೆ ಸಹಕರಿಸಬೇಕು. ಒಂದು ವೇಳೆ ಪರಸ್ಪರ ಬಲಾತ್ಕಾರ ವಾದರೆ, ಅದು ಯೇಸುವಿನ ಬೋಧನೆಗೆ ವಿರುದ್ಧವಾಗಿರುತ್ತದೆ.

### ಅಧೀನತೆ

"ಅಧೀನತೆ"ಗೆ ಒಳಗಾಗುವದು ಪ್ರತಿಯೊಬ್ಬರ ಜವಾಬ್ದಾರಿಯಾಗಿರುತ್ತದೆ (ಗ್ರೀಕ್.: *ಭಾಷೆಯಲ್ಲಿ ಹ್ಯೂಪೋಟಾಸ್ಸೊ*) ಆಕೆಯ ಅಥವಾ ಸ್ಥಾನಮಾನ ಏನೇ ಇದ್ದರೂ, ಪರಸ್ಪರ ಅಧಿನಕ್ಕೆ ಸ್ಪಂಧಿಸಲೇಬೇಕು. "ಅಧೀನತೆಯ" ಕುರಿತ ಈ ಕೆಳಗಿನ ಹೇಳಿಕೆಗಳನ್ನು ಗಮನಿಸೋಣ:

> (1) ಯೇಸು ತನ್ನ ತಂದೆ ತಾಯಿಗಳಿಗೆ ಅಧೀನನಾಗಿದ್ದನು (ಲೂಕ 2:51). (2) ಎಪ್ಪತ್ತು ಜನರಿಗೆ ದೆವ್ವಗಳು ಅಧೀನವಾಗಿದ್ದವು (ಲೂಕ 10:17, 20). (3) ಸೃಷ್ಠಿಯು, ದೇವರ ಚಿತ್ತದ ಅಧೀನತೆಗೆ ಒಳಪಡಬೇಕೆಂದು ದೇವರು ಮಾಡಿದನು (ರೋಮಾಪುರ 8:20). (4) ಪ್ರತಿ ಮನುಷ್ಯರು ಅಧಿಕಾರಕ್ಕೆ ಒಳಪಡ ಬೇಕು (ರೋಮಾಪುರ 13:1, 5; 1 ಪೇತ್ರ 2:13; ತೀತ 3:1). (5) ದೇವರು ಎಲ್ಲವನ್ನು ಯೇಸುವಿಗೆ ಅಧೀನ ಮಾಡಿದನು (1 ಕೊರಿಂಥ 15:27; ಎಫೆಸ 1:22; ಇಬ್ರಿಯ 2:8). (6) ಸಭೆಯು ಯೇಸುವಿಗೆ ಅಧೀನವಾಗಿದೆ (ಎಫೆಸ 5:24). (7) ನಾವೆಲ್ಲರೂ ದೇವರಿಗೆ

> ಅಧೀನರಾಗಬೇಕು (ಇಬ್ರಿಯ 12:9; ಯಾಕೋಬ 4:7). (8) ಸೇವಕರು ತಮ್ಮ ಯಜಮಾನರಿಗೆ ಅಧೀನರಾಗಬೇಕು (ತೀತ 2:9; 1 ಪೇತ್ರ 2:18). (9) ದೇವದೂತರೂ, ಸಕಲ ಅಧಿಕಾರವು ಯೇಸುವಿಗೆ ಅಧೀನವಾಗಿದೆ (1 ಪೇತ್ರ 3:22). (10) ಯೌವನಸ್ಥರಾದ ಕ್ರೈಸ್ತರು, ಹಿರಿಯ ಕ್ರೈಸ್ತರಿಗೆ ಅಧೀನರಾಗಬೇಕು (1 ಪೇತ್ರ 5:5).

*ಹ್ಯೂಪೋಟಾಸ್ಸೊ* ಎಂಬ ಪದ ಅಂದರೆ, ಅಧೀನತೆಯು ಹೇಗೆ ಮೇಲ್ಕಂಡ ವಿಷಯಗಳಲ್ಲಿ ಸಂಬಂಧ ಪಟ್ಟಿದೆಯೋ ಅದೇ ರೀತಿಯಾಗಿ ಹೆಂಡತಿಯು, ತನ್ನ ಎಲ್ಲಾ ಜವಾಬ್ದಾರಿಗಳಲ್ಲಿ ಗಂಡನಿಗೆ ಅಧೀನಳಾಗಿರಬೇಕು (ಎಫೆಸ 5:22, 24; ಕೊಲೊಸ್ಸೆ 3:18; ತೀತ 2:5; 1 ಪೇತ್ರ 3:1, 5). *ಹೂಪೋಟಾಸ್ಸೊ* ಎಂಬ ಪದವು, ಎರಡು ಪದಗಳನ್ನೊಳಗೊಂಡಿದೆ. ಹ್ಯೂಪೋ - ಅಂದರೆ ("ಒಳಪಡು") ಟಾಸ್ಸೊ - ಅಂದರೆ "ಏರ್ಪಾಟು" ಇದರ ಅರ್ಥ "ಉಪಯುಕ್ತ," "ದೀನ"; ಅಧೀನವಾಗುವದು ಗಂಡ ಹೆಂಡತಿಗೆ "ಅಧೀನನಾಗಿರಬೇಕು ಎಂಬ ನಿರ್ದಿಷ್ಟ ಅಪ್ಪಣೆ ಇರುವದಿಲ್ಲ." ಆದರೆ ಹೆಂಡತಿಯು ಗಂಡನಿಗೆ ಅಧೀನಳಾಗಿರಬೇಕು ಎಂದು ನಿರ್ದಿಷ್ಟವಾಗಿ ಅಪ್ಪಣೆ ನೀಡಲಾಗಿದೆ. ನಾವು ಪರಸ್ಪರ ಅಧೀನಕ್ಕೆ ಒಳಪಡಬೇಕು (ಎಫೆಸ 5:21; 1 ಕೊರಿಂಥ 16:16), ಎಂಬ ದೇವರ ನಿಯಮವು ನಾವು ಯಾರಿಗೆ ಅಧೀನರಾಗಬೇಕು ಎಂದು ಅಪ್ಪಣೆಮಾಡಲ್ಪಟ್ಟಿದೆಯೋ, ಅವರಿಗೆ ಅದೀನರಾಗಲೇ ಬೇಕು. ಒಂದು ವೇಳೆ ಒಬ್ಬ ಕ್ರೈಸ್ತನು ಗುಲಾಮನಾಗಿದ್ದರೆ, ತನ್ನ ಯಜಮಾನನಿಗೆ ಅಧೀನನಾಗಬೇಕು. ಒಬ್ಬ ನಾಗರೀಕನು ತನ್ನ ಸರ್ಕಾರಕ್ಕೆ ಅಧೀನನಾಗಬೇಕು. ಕಿರಿಯರು ಹಿರಿಯರಿಗೆ, ಆದರೆ ಇದಕ್ಕೆ ತದ್ವಿರುದ್ಧವಾದ ಅಧೀನತ್ವಕ್ಕೆ ಅಲ್ಲ. ಗಂಡ ಹೆಂಡರ ಸಂಬಂಧದಲ್ಲಿಯೂ ಸಹ, ಈ ಸತ್ಯವು ಅಡಗಿರುತ್ತದೆ:

> ಸ್ತ್ರೀಯರೇ, ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ. ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನೋ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ. ಅದಿರಲಿ; ಸಭೆಯು ಕ್ರಿಸ್ತನಿಗೆ ಹೇಗೆ ಅಧೀನವಾಗಿದೆಯೋ ಹಾಗೆಯೇ ಸ್ತ್ರೀಯರು ತಮ್ಮ ತಮ್ಮ ಗಂಡಂದಿರಿಗೆ ಎಲ್ಲಾ ವಿಷಯಗಳಲ್ಲಿ ಅಧೀನರಾಗಿಬೇಕು (ಎಫೆಸ 5:22-24).
>
> ಸ್ತ್ರೀಯರೇ, ನಿಮ್ಮ ಗಂಡಂದಿರಿಗೆ ಅಧೀನರಾಗಿರಿ; ಇದು ಕರ್ತನಲ್ಲಿರುವವರಿಗೆ ಯೋಗ್ಯವಾಗಿದೆ (ಕೊಲೊಸ್ಸೆ 3:18).
>
> ದೇವಭಕ್ತೆಯರಿಗೆ ಯೋಗ್ಯವಾದ ನಡತೆಯುಳ್ಳವರೂ ಸದ್ಬೋಧನೆ ಹೇಳುವವರೂ ಆಗಿರಬೇಕೆಂದು ಬೋಧಿಸು. ಇದಲ್ಲದೆ ಅವರು ಪ್ರಾಯದ ಸ್ತ್ರೀಯರಿಗೆ - ನಿಮ್ಮ ಮೂಲಕ ದೇವರ ವಾಕ್ಯಕ್ಕೆ ದೂಷಣೆಯಾಗದಂತೆ ನೀವು ಗಂಡಂದಿರನ್ನೂ ಮಕ್ಕಳನ್ನೂ ಪ್ರೀತಿಸುವವರೂ ದಮೆಯುಳ್ಳವರೂ ಪತಿವ್ರತೆಯರೂ ಮನೆಯಲ್ಲೇ ಕೆಲಸಮಾಡುವವರೂ ಸುಶೀಲೆಯರೂ ನಿಮ್ಮ ಗಂಡಂದಿರಿಗೆ ಅಧೀನರೂ ಆಗಿರಬೇಕೆಂದು ಬುದ್ಧಿಕಲಿಸುವ ಹಾಗೆ ಬೋಧಿಸು (ತೀತನು 2:3-5).
>
> ಅದೇ ರೀತಿಯಾಗಿ ಸ್ತ್ರೀಯರೇ, ನಿಮ್ಮ ಗಂಡಂದಿರಿಗೆ ಅಧೀನರಾಗಿರಿ (1 ಪೇತ್ರ 3:1).

ಒಬ್ಬ ಕ್ರೈಸ್ತನಾದ ಗುಲಾಮನು ತನ್ನ ಯಜಮಾನನಿಗೆ ತಿರಿಗಿ ಬೀಳುವ ಹಕ್ಕು ಹೊಂದಿರುವದಿಲ್ಲ, ನಾಗರೀಕನು ತಾನು ಒಳಪಟ್ಟಿರುವ ಸರ್ಕಾರಕ್ಕೆ ತಿರಿಗಿ ಬೀಳುವ ಹಕ್ಕು ಹೊಂದಿರುವದಿಲ್ಲ, ಕಿರಿಯನು ಸಹ ಹಿರಿಯನ ಮೇಲೆ ಹಕ್ಕು ಹೊಂದಿರುವದಿಲ್ಲ, ಅಥವಾ ಕ್ರೈಸ್ತ ಹೆಂಡತಿಯು, ತನ್ನ ಗಂಡನಿಗೆ ತಿರಿಗಿ ಬೀಳುವ ಹಕ್ಕು ಹೊಂದಿರುವದಿಲ್ಲ.

ಈ ಏರ್ಪಾಟಿಗೆ ತಿರಿಗಿ ಬೀಳುವ ಯಾರೇ ಆದರು, ಅವರು ದೇವರ ವಾಕ್ಯಕ್ಕೆ ವಿರೋಧ ವಾದದ್ದನ್ನೇ ಮಾಡಲು ನಿರ್ಧರಿಸುತ್ತಾರೆ, ಮತ್ತು ಮನುಷ್ಯರ ಅಧಿಕಾರಕ್ಕೆ ಒಳಗಾಗದವನು ದೇವರ ಚಿತ್ತಕ್ಕೆ ಒಳಪಡದವನಾಗಿದ್ದಾನೆ (ಅಪೊಸ್ತಲರಕೃತ್ಯಗಳು 5:29).

ಗಂಡನನ್ನು ದೇವರು ಹೆಂಡತಿಗೆ ತಲೆಯಾಗಿ ಮಾಡಿರುವದರಿಂದ, ಹೆಂಡತಿಯು ಗಂಡನಿಗೆ ಅಧೀನಳಾಗಬೇಕು (1 ಕೊರಿಂಥ 11:3; ಎಫೆಸ 5:23). ಗ್ರೀಕ್ ಭಾಷೆಯ *ಕೆಫಾಲೆ* ಎಂಬ ಪದದಿಂದ "ತಲೆ" ಎಂಬ ಪದವು ತರ್ಜುಮೆಗೊಂಡಿದೆ. ಇದಕ್ಕೆ ಅನೇಕ ಅರ್ಥಗಳುಂಟು. (1) ತಲೆಯು, ದೇಹವನ್ನು ಹತೋಟಿಯಲ್ಲಿಡುವ ಪಾತ್ರವನ್ನು ಮಾಡುತ್ತದೆ (ಮತ್ತಾಯ 5:36; 6:17; 8:20; 10:30). (2) ಒಂದು ಕಟ್ಟಡಕ್ಕೆ ಹೇಗೆ ಒಂದು ಮೂಲೆಯಕಲ್ಲು ಆಧಾರವಾಗಿರುತ್ತದೋ, ಹಾಗೆಯೇ, ದೇಹದಲ್ಲಿರುವ ತಲೆಗೆ, ದೇಹದ ಉಳಿದ ಭಾಗವು ಹೆಣೆದುಕೊಂಡಿರುತ್ತದೆ (ಮತ್ತಾಯ 21:42; ಮಾರ್ಕ 12:10; ಲೂಕ 20:17; ಅಪೊಸ್ತಲರಕೃತ್ಯಗಳು 4:11; 1 ಪೇತ್ರ 2:7). (3) ಯಾರ್ಯಾರು ತಲೆಯ ಅಧಿಕಾರಕ್ಕೆ ಒಳಗಾಗಿದ್ದಾರೋ, ಅವರು ತಲೆಯ ಜವಾಬ್ದಾರಿಗೆ ಒಳಗಾಗಿದ್ದಾರೆ. ದೇವರು ಕ್ರಿಸ್ತನಿಗೆ ತಲೆಯಾಗಿದ್ದಾನೆ, ಕ್ರಿಸ್ತನು ಪುರುಷನಿಗೆ ತಲೆಯಾಗಿದ್ದಾನೆ ಕ್ರಿಸ್ತನು ಸಭೆಗೂ ತಲೆಯಾಗಿದ್ದಾನೆ (ಎಫೆಸ 1:22; 4:15; 5:23; ಕೊಲೊಸ್ಸೆ 1:18) ಮತ್ತು ಎಲ್ಲಾ ಅಧಿಕಾರಕ್ಕೂ ತಲೆಯಾಗಿದ್ದಾನೆ (ಕೊಲೊಸ್ಸೆ 2:10). (4) ಗಂಡ/ಹೆಂಡತಿಯರ ಸಂಬಂಧದಲ್ಲಿ ಪುರುಷನೇ ನಾಯಕತ್ವದ ಜವಾಬ್ದಾರಿಯ ಕೊರತೆಯನ್ನು ನೀಗಿಸ ಬೇಕು (1 ಕೊರಿಂಥ 11:3; ಎಫೆಸ 5:23).

"ತಲೆಯಾಗಿರುವವನಿಗೆ" ಅಧಿಕಾರದ ಜವಾಬ್ದಾರಿ ಇರುತ್ತದೆ. "ಸ್ವ ಅಧೀನತೆಯೇ" ಅಧಿಕಾರಕ್ಕೆ ಪ್ರತಿಕ್ರಿಯೆಯಾಗಿರುತ್ತದೆ. ಯೇಸು ತನಗೆ ತಾನೇ ಕಳಂಕ ತಂದು ಕೊಳ್ಳದಂತೆ, ತಾನು ತನ್ನ "ತಲೆಯಾದ ತಂದೆಗೆ ದೀನತೆಯಿಂದ ಅಧೀನನಾಗುವ ಮೂಲಕ ತನ್ನನ್ನು ಉನ್ನತ ಸ್ಥಾನಕ್ಕೆ ಏರಿಸಿಕೊಂಡನು" (ಫಿಲಿಪ್ಪಿ 2:5-11), ತನ್ನ ತಂದೆ ತಾಯಿಗೂ ಅಧೀನನಾಗಿದ್ದನು (ಲೂಕ 2:51). ಸ್ವ ಇಚ್ಛೆಯಿಂದ ಅಧೀನಕ್ಕೆ ಒಳಗಾಗುವದು ನಮ್ಮನ್ನು ಹೀನ ಸ್ಥಿತಿಗೆ ತರುವದಿಲ್ಲ. ನಾವು ಯಾರಿಗೆ ಅಧೀನರಾಗಬೇಕೋ, ಅವರಿಗೆ ಹೃದಯ ಪೂರ್ವಕವಾಗಿ ಅಧೀನರಾದರೆ, ಅದು ನಮಗೆ ಯೋಗ್ಯತೆಯನ್ನು ತರುತ್ತದೆ. ಹೆಂಡತಿಯು ತನ್ನ ಗಂಡನಿಗೆ ಅಧೀನಳಾಗುವದರಿಂದ, ಅದು ಅವಳಿಗೆ ಕಳಂಕವಾಗುವದಿಲ್ಲ, ಆದರೆ ಅವಳ ಅಧೀನತೆಯ ಮೂಲಕ, ಸಾರಳಂತೆಯೂ ಮತ್ತು ಇನ್ನಿತರ ಬೈಬಲ್‌ನ ದೇವ ಭಕ್ತೆಯರಾದ ಸ್ತ್ರೀಯರಂತೆ ಗೌರವಾನಿತ್ವವಾದ ಸದ್ಗುಣವುಳ್ಳವಳಾಗುತ್ತಾಳೆ: "ಪೂರ್ವಕಾಲದಲ್ಲಿ ದೇವರ ಮೇಲೆ ನಿರೀಕ್ಷೆ ಇಟ್ಟ ಭಕ್ತೆಯರಾದ ಸ್ತ್ರೀಯರು ಸಹ ಹೀಗೆಯೇ ತಮ್ಮನ್ನು ಅಲಂಕರಿಸಿಕೊಂಡು, ಅವರು ತಮ್ಮ ತಮ್ಮ ಗಂಡಂದಿರಿಗೆ ಅಧೀನರಾಗಿದ್ದು ಯಾವ ಭೀತಿಗೂ ಗಾಬರಿಪಡದೇ ಒಳ್ಳೇದನ್ನೇ ಮಾಡುವವರಾಗಿದ್ದರು" (1 ಪೇತ್ರ 3:5).

ಈ ಆದುನಿಕ ಪ್ರಪಂಚದಲ್ಲಿರುವ ಹೆಂಡತಿಯು ತನ್ನ ಕ್ರೈಸ್ತನಾದ ಗಂಡನಿಗೆ ಹೇಗೆ ಅಧೀನಳಾಗಬೇಕೋ, ಅದೇ ರೀತಿಯಲ್ಲಿ ಕ್ರೈಸ್ತನಲ್ಲದ ಗಂಡನಿಗೂ ಅಧೀನಳಾಗಬೇಕು (1 ಪೇತ್ರ 3:1, 2). ಗಂಡನನ್ನು ಗೌರವಾನ್ವಿತ ನಡತೆಯಿಂದ ಹೆಂಡತಿಯಾದವಳು ಅವನನ್ನು ಕ್ರೈಸ್ತನಿಗೋಸ್ಕರ ಜಯಿಸುವದಕ್ಕಾಗಿ ಗಂಡನ ಆಧೀನತೆಯಲ್ಲಿರುವುದು ಮಾತ್ರವಲ್ಲದೆ ದೇವರಿಗೆ ವಿಧೇಯಳಾಗುವದಕೋಸ್ಕರ ಹೆಂಡತಿಯಾದವಳು ಆಧೀನತೆಯಿಂದ ಇರುತ್ತಾಳೆ (1 ಪೇತ್ರ 3:5, 6).

**ಸನ್ಮಾನ**

"ಪ್ರತಿ ಹೆಂಡತಿಯು ತನ್ನ ಗಂಡನಿಗೆ ಭಯಭಕ್ತಿಯಿಂದ ನಡೆದುಕೊಳ್ಳಬೇಕು ಎಂದು" (ಎಫೆಸ 5:33ಬಿ) ಪೌಲನು ಬರೆದಿದ್ದಾನೆ. "ಸನ್ಮಾನ" ಎಂಬ ಪದವು *ಫೊಬತಾಯ್* ಎಂಬ ಪದದ ತರ್ಜುಮೆಯಾಗಿದೆ. ಅ ಪದದ ಅರ್ಥ "ಅಂಜಿಕೆ" (ಮತ್ತಾಯ 2:22; 14:5, 30;

17:6) ಮತ್ತು "ಸನ್ಮಾನ ಪೂರಿತವಾದ ಅಂಜಿಕೆ" (ಅಪೊಸ್ತಲರಕೃತ್ಯಗಳು 10:2, 35; 13:16, 26; 1 ಪೇತ್ರ 2:17). ಸಂಬಂಧದಲ್ಲಿ ಪುರುಷನು ನಾಯಕನಾಗಿರುವದರಿಂದ, ಹೆಂಡತಿಯು ಅವನನ್ನು ಸನ್ಮಾನಿಸಬೇಕು. ಆಕೆ ಒಂದು ವೇಳೆ ಗಂಡನನ್ನು ಸನ್ಮಾನಿಸದೇ ಇದ್ದರೆ ಸಭೆಯ ಸಂಬಂಧದಲ್ಲಿ ಸಭೆಯು ಯೇಸು ಕ್ರಿಸ್ತನ ನಾಯಕತ್ವಕ್ಕೆ ಸನ್ಮಾನ ನೀಡದ ರೀತಿಯಲ್ಲಿರುತ್ತದೆ (ಎಫೆಸ 5:24).

ಗಂಡನಿಗೆ, ಹೆಂಡತಿಯು ನೀಡುವ ಸನ್ಮಾನದ ಉದಾಹರಣೆಗೆ ಸಾರಳ ಪಾತ್ರವನ್ನು ಗಮನಿಸಲಾಗಿದೆ, ಆಕೆಯು ಅಬ್ರಹಾಮನಿಗೆ ವಿಧೇಯಳು ಮಾತ್ರವಾಗಿರದೆ, ಅವನನ್ನು "ಯಜಮಾನ" ಎಂದು ಸಂಬೋಧಿಸಿದಳು (1 ಪೇತ್ರ 3:6; ಆದಿಕಾಂಡ 18:12). ಒಂದು ವೇಳೆ "ಯಜಮಾನ" ಎಂಬ ಪದದ ಬದಲು "ಸ್ವಾಮಿ," ಎಂಬುದಾಗಿ ಸಂಬೋಧಿಸಿದ್ದರೆ, ಅದು ಸನ್ಮಾನಿಸಲು ಸಿದ್ಧವಿಲ್ಲದ ಹೃದಯವನ್ನು ಸೂಚಿಸುತ್ತದೆ. ಅವಳು ಅವನನ್ನು ಸನ್ಮಾನಿಸಿದ್ದರಿಂದ, "ಯಜಮಾನ" ಎಂದು ಕರೆದಳು. ದೈವೀಕವಾದ ಮನೋಭಾವನೆಯಿಂದ "ಯಜಮಾನ" ಎಂದು ಕರೆಯದೇ ಅವನು ಆಕೆಯ ಯಜಮಾನನಾಗಿದ್ದು, ಅವನಿಗೆ ಮಾನವೀಯ ಅಧಿಕಾರ ಇದ್ದದ್ದರಿಂದ ಅವನನ್ನು "ಯಜಮಾನ" ಎಂದು ಸಂಬೋಧಿಸಿದಳು.

ಸಾರಳು ತನ್ನ ಸಂಸ್ಕೃತಿಗೆ ಅನುಗುಣವಾಗಿ ವರ್ತಿಸಿದಳು ಎಂದು ಕೆಲವರು ನಿರ್ಣಯಿಸುತ್ತಾರೆ, ಮತ್ತು ವಸ್ತ್ರಾಧಾರಣೆಯ ಕುರಿತಾಗಿ ಪೇತ್ರನು, ಅದು ಅವರ ಸಂಸ್ಕೃತಿಯಲ್ಲಿದೆ ಎಂದು ಸಲಹೆಗಳನ್ನು ನೀಡಿರುವದನ್ನು ಪ್ರಸ್ತಾಪಿಸುತ್ತಾರೆ (1 ಪೇತ್ರ 3:3-5). ಆ ರೀತಿಯಾದ ನಿರ್ಣಯವು "ಅಪಾರ್ಥ"ವನ್ನು ಉಂಟುಮಾಡುತ್ತದೆ. ಇಲ್ಲಿ ಪೇತ್ರನು ಗ್ರೀಕ್ ಪದವಾದ ಇಡಿಯಂ *ಉ ... ಅಲ್ಲಾ,* ಪದವು ತರ್ಜುಮೆಗೊಂಡು "ಇಲ್ಲ ... ವಾದರೆ" ಎಂಬುದಾಗಿರುತ್ತದೆ. ಮೊಲನೆಯದನ್ನು ಅಲಕ್ಷಿಸದೆ, ಎರಡನೆಯ ಆಲೋಚನೆಯನ್ನು ಒತ್ತಿ ಹೇಳುವದೇ ಈ ವ್ಯಾಖ್ಯಾನದ ನಿರ್ಮಾಣವಾಗಿರುತ್ತದೆ. ಉದಾಹರಣೆಗೆ (ಮತ್ತಾಯ 10:34; ಯೋಹಾನ 12:47; 1 ಕೊರಿಂಥ 1:17). ರಾಬರ್ಲ್ಟ್ ಪೌಂಡ್‌ರವರ ವ್ಯಾಖ್ಯಾನ "ಉ ... *ಎಲ್ಲಾ* ಅಂದರೆ ಹೆಚ್ಚಾಗಿ ಇಲ್ಲದೆ ಇರುವದು ... ಅಂದರೆ ಮೊದಲನೆಯ ಸಂಗತಿಯನ್ನು ಸಂಪೂರ್ಣ ನಿರಾಕರಿಸದೆ, ಸರಳೀಕರಿಸುವುದು."[1]

ಪೇತ್ರನು ಬರೆದು, ಸ್ತ್ರೀಯರು ಜಡೆ, ಚಿನ್ನ ಮತ್ತು ಬೆಲೆಯುಳ್ಳ ವಸ್ತ್ರ ಮುಂತಾದವುಗಳಿಂದ ತಮ್ಮನ್ನು ಅಲಂಕರಿಸಿಕೊಳ್ಳಬಾರದು ಎಂದು ಬರೆಯದೆ, ಅಥವಾ ಈ ಪಟ್ಟಿಯಲ್ಲಿ ವಸ್ತ್ರದ ಕುರಿತು ಸೇರಿಸಿರುವದರಿಂದ ಸ್ತ್ರೀಯರು ವಸ್ತ್ರಧರಿಸಬಾರದು ಎಂದು ಹೇಳದೆ, ಪೇತ್ರನು "ಇಡಿಯಂ" ಎಂಬ ಪದವನ್ನು ಉಪಯೋಗಿಸಿದ್ದಾನೆ. "ದೇವ ಭಕ್ತೆಯರೆನಿಸಿಕೊಳ್ಳುವ ಸ್ತ್ರೀಯರಿಗೆ ಯುಕ್ತವಾಗಿರುವ ಪ್ರಕಾರ ಸತ್ಕ್ರಿಯೆಗಳಿಂದಲೇ ಅಲಂಕರಿಸಿಕೊಳ್ಳಬೇಕು" ಎಂದು ಬರೆದಿದ್ದಾನೆ. 1 ತಿಮೊಥೆ 2:9, 10ರಲ್ಲಿ ಪೌಲನೂ ಸಹ ಪೇತ್ರನು ವ್ಯಾಖ್ಯಾನಕ್ಕೆ ಪೂರ್ವಕವಾಗಿ ವ್ಯಾಖ್ಯಾನಿಸಿದ್ದಾನೆ. ಇಡಿಯಂ ... ಉ - ಅಲ್ಲಾ (ಇಲ್ಲ ... ವಾದರೆ). ಈ ವ್ಯಾಖ್ಯಾನದ ಅರ್ಥವು ಸಹ ಸರಳವಾಗಿ ಇದರಷ್ಟು ಹೆಚ್ಚಾಗಿ ಇಲ್ಲದೆ "ಎ"ಗಿಂತಲೂ ಹೆಚ್ಚಾಗಿ "ಬಿ" ಎಂಬ ಅರ್ಥ (ಯೋಹಾನ 6:27 ಹೋಲಿಸಿ). ಸ್ತ್ರೀಯು ತನ್ನ ಅಂತರಾಳದ ಸದ್ಗುಣಗಳಿಗಿಂತ ಹೆಚ್ಚಾಗಿ ಬಾಹ್ಯ ಭೂಷಣಕ್ಕೆ ಹೆಚ್ಚು ಒತ್ತು ನೀಡಬಾರದು.

## ಮುಕ್ತಾಯ

ಗಂಡ ಹೆಂಡತಿಯರ ಸಂಬಂಧದಲ್ಲಿ, ದೇವರು ಗಂಡನಿಗೆ ನಾಯಕತ್ವದ ಜವಾಬ್ದಾರಿ ನೀಡಿರುವದರಿಂದ, ಇಲ್ಲಿ ವಾಗ್ವಾದವು ಅಪ್ರಾಯಮಾನವಾಗಿರುತ್ತದೆ. ಅವನು ತನ್ನ ಹೆಂಡತಿಗೆ ಸಲಹೆ ಸೂಚನೆಗಳನ್ನು ನೀಡುವ ನಾಯಕತ್ವದ ಮೂಲಕ ಮತ್ತು ಪ್ರೀತಿ ಹಾಗೂ ಚಿಂತನೆಯನ್ನು ನೀಡುವದರ ಮೂಲಕ, ಆಕೆಯಿಂದ ಸನ್ಮಾನವನ್ನು ಗೆದ್ದುಕೊಳ್ಳಬೇಕು. ಹೆಂಡತಿಯು ಈ ಏರ್ಪಾಟನ್ನು ಒಪ್ಪಿಕೊಂಡು ಗಂಡನಿಗೆ ಅಧೀನಳಾಗಿರಬೇಕು. ಇದನ್ನು

ಗಂಡನು ತನ್ನ ಹಕ್ಕು ಎಂಬುದಾಗಿ ತಿಳಿದರೆ ಇದು ದೇವರ ಚಿತ್ತಕ್ಕೆ ವಿರುದ್ಧವಾಗಿರುತ್ತದೆ.

ಗಂಡನು ತಾನು ಹೆಂಡತಿಯೊಡನೆ, ಜವಾಬ್ದಾರಿಯುತವಾಗಿ ನಡಕೊಳ್ಳಲು ಹಾಗೂ ಹೆಂಡತಿಯು, ಗಂಡನೊಂದಿಗೆ ಜವಾಬ್ದಾರಿಯುತವಾಗಿ ವರ್ತಿಸಲು ಪ್ರಾರ್ಥನೆ ಮತ್ತು ಆಲೋಚನೆಯು ಅತಿ ಪ್ರಾಮುಖ್ಯವಾಗಿರುತ್ತದೆ. ದೇವರ ವಾಕ್ಯವನ್ನೇ ತನ್ನ ಬಲವನ್ನಾಗಿಯೂ, ಸೂಚನೆಯನ್ನಾಗಿಯೂ ಹೊಂದಿರುವಂಥಹ ಕ್ರೈಸ್ತ ಸ್ತ್ರೀಯು ಪ್ರತಿ ದಿವಸವನ್ನು ಎದುರಿಸಲು ತನ್ನ ಗಂಡನಿಗೆ ಧೈರ್ಯವನ್ನು ನೀಡುತ್ತಾಳೆ, ಮತ್ತು ಮುರಿದ ಮನಕ್ಕೆ ಸಾಂತ್ವನವನ್ನು ನೀಡುತ್ತಾಳೆ. ದೈಹೀಕ ಕೊರತೆಗಳನ್ನು ನೀಡುತ್ತಾಳೆ, ಕುಟುಂಬದಲ್ಲಿ ಆತ್ಮೀಕ ಪರಿಸರವನ್ನು ನೀಡುತ್ತಾಳೆ. ಆಕೆಯು ಕುಟುಂಬದಲ್ಲಿ ನಿರ್ಮಿಸವಂಥ ವಿಶ್ರಾಂತಿಕರವಾದ ಪರಿಸರವನ್ನೂ ಸಮಾಧಾನವನ್ನೂ, ಅನ್ಯೋನ್ಯತೆಯನ್ನೂ ಆಕೆಯ ಗಂಡನು ದೂರದಲ್ಲಿದ್ದರೂ ಅದನ್ನು ಬಯಸುವವನಾಗಿರುತ್ತಾನೆ. ಇದರ ಮೂಲಕ ಗಂಡನು ಜೀವಿತವನ್ನು ಜೀವಿಸಲು, ಈ ಆದರಣೆಯ ಸದ್ಗುಣಗಳು ಅವನಿಗೆ ಸಹಾಯಿಸುತ್ತವೆ.

---

ಟಿಪ್ಪಣಿ

[1]Robert W. Fund, *A Greek Grammar of the New Testament* (Chicago: University Press, 1961), 233.